334
15/2/2021

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** M/s Coastal Consolidated Structures Private Limited, ಕಂಪನಿಯವರಿಗೆ ಕೊಪ್ಪಳ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 3.4 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s ReNew Surya Roshni Private Limited ರವರಿಗೆ ವರ್ಗಾಯಿಸಿ, ಸದರಿ ಸಾಮರ್ಥ್ಯವನ್ನು 180.4 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 208 ಎನ್‌ಸಿಇ 2020, ದಿನಾಂಕ:13.11.2020
2. ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 162 ಎನ್‌ಸಿಇ 2020, ದಿನಾಂಕ:06.01.2021
3. ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರ ಪತ್ರ ಸಂಖ್ಯೆ: ಗ್ರ KREDL/08/RSRPL-180.4 MW (CCSPL-3.4MW)/Koppal/F-1997/2020/4360, ದಿನಾಂಕ: 10.11.2020

**ಪ್ರಸ್ತಾವನೆ:-**

ಮೇಲೆ ಓದಲಾದ (1)ರ ಸರ್ಕಾರದ ಆದೇಶದನ್ವಯ M/s Coastal Consolidated Structures Private Limited, ಕಂಪನಿಯವರಿಗೆ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಸೊಮ್ ಪುರ, ಬಿನ್ನಾಲ, ಚಿಕ್ಕೇನಕೊಪ್ಪ, ಹಂಚಿಹಾಲ್, ಶಿದ್ನಕೊಪ್ಪ ಮತ್ತು ತಿಮ್ಮಾಪುರ ಗ್ರಾಮಗಳಲ್ಲಿ 3.4 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಆದೇಶದನ್ವಯ M/s Sitac Management & Development Private Limited ಕಂಪನಿಯವರಿಗೆ ಕೊಪ್ಪಳ ಜಿಲ್ಲೆಯ, ಯಲಬುರ್ಗಾ ತಾಲ್ಲೂಕಿನ ಹಿರೇಹಂಚಿನಾಳ, ಹಳ್ಳಿಗುಡಿ, ಹರಲಾಪುರ, ಸೋಮಪುರ, ಸಿದ್ನೇಕೊಪ್ಪ, ಮಂಡಲಗೇರಿ, ಮಲೇಕೊಪ್ಪ ಮತ್ತು ಅನುಕೊಂಡನಕೊಪ್ಪ ಗ್ರಾಮಗಳಲ್ಲಿ 40 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Coastal Consolidated Structures Private Limited ರವರಿಗೆ ಈಗಾಗಲೇ ಹಂಚಿಕೆ ಮಾಡಿರುವ 3.4 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಯಾವುದೇ ತೊಂದರೆಯಾಗದಂತೆ ಅನುಷ್ಠಾನಗೊಳಿಸುವ ಷರತ್ತಿಗೊಳಪಟ್ಟು ಹಂಚಿಕೆ ಮಾಡಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್.ರವರು ಸರ್ಕಾರಕ್ಕೆ ಸಲ್ಲಿಸಿರುವ ತಮ್ಮ ಪ್ರಸ್ತಾವನೆಯಲ್ಲಿ ಮೇಲಿನ ಆದೇಶದನ್ವಯ M/s Coastal Consolidated Structures Private Limited, ಕಂಪನಿಗೆ ಹಂಚಿಕೆಯಾಗಿರುವ 3.4 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s ReNew Surya Roshni Private Limited ಕಂಪನಿಯವರಿಗೆ ವರ್ಗಾವಣೆ ಮಾಡುವಂತೆ, ತದನಂತರ ಸದರಿ ಸಾಮರ್ಥ್ಯವನ್ನು 180.4 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವಂತೆ M/s ReNew Surya Roshni Private Limited ಇವರು ಕೆ.ಆರ್.ಇ.ಡಿ.ಎಲ್.ನ್ನು ಕೋರಿರುವುದಾಗಿ ತಿಳಿಸುತ್ತಾ, ಸದರಿ ವರ್ಗಾವಣೆಗೆ ಎರಡು ಕಂಪನಿಯವರು ಸಹಮತಿ ನೀಡಿರುವುದಾಗಿ ಹಾಗೂ ಸದರಿ ವರ್ಗಾವಣೆಗೆ ಅನ್ವಯವಾಗುವ ವರ್ಗಾವಣೆ ಶುಲ್ಕವನ್ನು ಪಾವತಿಸಿಕೊಂಡಿರುವುದಾಗಿ ಮತ್ತು 3.4 ಮೆ.ವ್ಯಾ ಸಾಮರ್ಥ್ಯವನ್ನು 180.4 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವ ಸಂಬಂಧ ಡಿಪಿಆರ್ ಸಲ್ಲಿಸಿ, ನಿಗಧಿತ ಶುಲ್ಕವನ್ನು ಕೆಆರ್‌ಇಡಿಎಲ್‌ಗೆ ಪಾವತಿಸಿರುವುದಾಗಿ ತಿಳಿಸುತ್ತಾ, ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತಿನ ಕುರಿತು ವೀಲಿಂಗ್ ಮುಖಾಂತರ ಮೂರನೇ ವ್ಯಕ್ತಿಗೆ ಮಾರಾಟ/ಸ್ವಂತ ಬಳಕೆ (Captive) ಮಾಡಿಕೊಳ್ಳುವ ಷರತ್ತಿನೊಂದಿಗೆ M/s Coastal Consolidated Structures Private Limited, ಕಂಪನಿಯವರಿಗೆ ಹಂಚಿಕೆಯಾಗಿರುವ 3.4 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s ReNew Surya Roshni Private Limited ಕಂಪನಿಯವರಿಗೆ ವರ್ಗಾಯಿಸಿ, ತದನಂತರ ಸದರಿ ಸಾಮರ್ಥ್ಯವನ್ನು 180.4 ಮೆ.ವ್ಯಾಗೆ ಹೆಚ್ಚಿಸುವ ಸಂಬಂಧ ಸದರಿ ಯೋಜನೆಯ ಚೆಕ್‌ಲಿಸ್ಟ್‌ನೊಂದಿಗೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

Wind Section
Inward No. 791
Date: 16-02-2021

A10-4
16/2

ಮುಂದುವರೆದು M/s Sitac Management & Development Private Limited ರವರು M/s Coastal Consolidated Structures Private Limited ರವರು ಈಗಾಗಲೇ ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 3.4 ಮೆ.ವ್ಯಾ. ಸಾಮರ್ಥ್ಯಕ್ಕೆ ಹಂಚಿಕೆ ಆದೇಶ ನೀಡಿರುವಂತೆ ಕೋರಿ ಡಿ.ಪಿ.ಆರ್. ಸಲ್ಲಿಸಿದ್ದ ಸ್ಥಳದ ಮೇಲೆಯೇ 40 ಮೆ.ವ್ಯಾ. ಸಾಮರ್ಥ್ಯವನ್ನು ಹಂಚಿಕೆ ಮಾಡುವಂತೆ ಕೋರಿ ಡಿಪಿಆರ್ ಸಲ್ಲಿಸಿ ಹಾಗೂ ಅನ್ವಯಿಸುವ ಶುಲ್ಕವನ್ನು ಪಾವತಿಸಿ, ಯೋಜನೆಗೆ ಬೇಕಾಗುವ 193 ಎಕರೆ 04 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಭೂಮಾಲಿಕರೊಂದಿಗೆ ಮಾಡಿಕೊಂಡಿರುವ ATS (Agreement to Sale) ದಾಖಲೆಗಳನ್ನು ಈ ಕೆಳಕಂಡಂತೆ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

| Sl. No. | Village Name | Land Owner Name | Survey Nos | Land Extent |
|---|---|---|---|---|
| 1 | Yarehanchinal | Ningaredippa S/o Shivbasappa, Joint Family | 619/P3 | 27-15 |
| 2 | Yarehanchinal | Hucchappa S/o Mallappa Gudmi, Joint Family | 524 | 18-03 |
| 3 | Yarehanchinal | Balappa-Basappa Devara Vara | 541*A | 5-38 |
| 4 | Haligudi | Ammi Bhemappa S/o Nagappa | 239 | 9-0 |
| 5 | Haligudi | Hanchinhal Gundappa S/o Nigappa | 1A/1 | 4-7 |
| 6 | Harlapura | Malli Hucchirappa | 129/*/2 | 13-15 |
| 7 | Sompur | Hanamappa S/o Yallappa, Joint Family | 228/*/B | 8-00 |
| 8 | Sompur | Nagappa S/o Sannahanamappa Dambala | 242/*/* | 7-3 |
| 9 | Yarehanchinala | Gavisiddappa S/o Basappa Boodhihala | 347 | 9-35 |
| 10 | Yarehanchinala | Nagappa S/o Mylarappa Betageri | 306 | 5-2 |
| 11 | Sidnikoppa | Kalakappa S/o Shidlingappa | 27/*/1 | 5-1 |
| 12 | Sidnikoppa | Veerappa S/o Basappa Vanalli | 4/*/A | 2-07 |
| | | Kashappa S/o Basappa Vanahalli | 4/*/A | 2-07 |
| 13 | Mandalgiri | Eshwarayya S/o Nagayya Gadaada Sa Mandalageri, Joint Family | 300/*/1 | 13-13 |
| 14 | Mandalagiri | Bhimappa S/o Hanamapp Dalavayi | 275/*/A | 1-02 |
| | | Devappa S/o Veerabasappa Dalavi, Joint Family | 275/*/A | 4-06 |
| 15 | Mandalagiri | Hucchirappa S/o Mariyappa Alavandi, Joint Family | 247/*/* | 2-32 |
| 16 | Sompur | Hanamappa S/o Channappa Madivala, Alavandi, Joint | 261/*/1 | 3-3 |
| | | Bhimappa S/o Shivalingappa Agasara | 261/*/2 | 3-3 |
| 17 | Sompur | Parameshwarappa S/o Basappa Hosamani | 145/*/1 | 10-3 |
| 18 | Malekoppa | Mardanasab S/o Kashimasab Hiremani, Bashusab, Mahaboobusab | 85/*/1 | 5-34 |
| 19 | Anukondanakoppa | Urirappa S/o Mallappa, Joint Family | 44/*/A P1 | 8-08 |
| 20 | Malekoppa | Manjunatha S/o Sankappa Jivanar | 136/*/1 | 3-07 |
| | | Basavaraj S/o Sivappa Jivanar | 136/*/2 | 2-00 |
| | | **Total** | | 193-04 |

ದಿನಾಂಕ: 29.09.2020 ರಂದು ನಡೆದ ಹಂಚಿಕೆ ಸಮಿತಿಯಲ್ಲಿ ನಿರ್ಣಯದಂತೆ ಹಾಗೂ ಕ್ರೆಡಲ್ ರವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಂತೆ, M/s Sitac Management & Development Private Limited ರವರ 40 ಮೆ.ವ್ಯಾ. ಸಾಮರ್ಥ್ಯದ ಯೋಜನೆಗೆ ಬೇಕಾಗುವ (193 ಎಕರೆ 04 ಗುಂಟೆ) ಪ್ರದೇಶಗಳನ್ನು ಸದರಿಯವರು ಸಲ್ಲಿಸಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಲ್ಲಿ ಅನುಷ್ಠಾನಗೊಳಿಸಲು ಮತ್ತು

...3

ಸದರಿಯವರ 40 ಮೆ.ವ್ಯಾ. ಸಾಮರ್ಥ್ಯದ ಯೋಜನೆಗೆ ಯಾವುದೇ ತೊಂದರೆಯಾಗದಂತೆ ಉಳಿದ ಪ್ರದೇಶದಲ್ಲಿ M/s ReNew Surya Roshni Private Limited ಕಂಪನಿಯವರು M/s Coastal Consolidated Structures Private Limited ರವರ 3.4 ಮೆ.ವ್ಯಾ. ಸಾಮರ್ಥ್ಯವನ್ನು ವರ್ಗಾಯಿಸಿಕೊಂಡು ತದನಂತರ, 180.4 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ :ಎನರ್ಜಿ 208 ಎನ್ ಸಿಇ 2020**
**ಬೆಂಗಳೂರು ದಿನಾಂಕ:11.02.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, M/s Coastal Consolidated Structures Private Limited, ಕಂಪನಿಯವರಿಗೆ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಸೊಮ್ ಪುರ, ಬಿನ್ನಾಲ, ಚಿಕ್ಕೇನಕೊಪ್ಪ, ಹಂಚಿಹಾಲ್, ಶಿದ್ನಕೊಪ್ಪ ಮತ್ತು ತಿಮ್ಮಾಪುರ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 3.4 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s ReNew Surya Roshni Private Limited ಕಂಪನಿಯವರಿಗೆ M/s Sitac Management & Development Private Limited ರವರ 40 ಮೆ.ವ್ಯಾ. ಸಾಮರ್ಥ್ಯದ ಯೋಜನೆಗೆ ಬೇಕಾಗುವ 193 ಎಕರೆ 04 ಗುಂಟೆ ಪ್ರದೇಶದಲ್ಲಿ ಮೇಲೆ ನಮೂದಿಸಿರುವ ಸರ್ವೆ ನಂಬರ್‌ಗಳ ಜಮೀನುಗಳನ್ನು ಹೊರತುಪಡಿಸಿ, ಉಳಿದ ಪ್ರದೇಶದಲ್ಲಿ ಈ ಕೆಳಕಂಡ ಶೆಡ್ಯೂಲ್ ಹಾಗೂ ಷರತ್ತಿಗೊಳಪಟ್ಟು ವರ್ಗಾಯಿಸಿ, ಸದರಿ ಸಾಮರ್ಥ್ಯವನ್ನು 180.4 ಮೆ.ವ್ಯಾಗೆ ಹೆಚ್ಚಿಸಿ ಆದೇಶಿಸಿದೆ.

**Geographical area description for 180.4 MW capacity wind power project of M/s ReNew Surya Roshni Private Limited**

| Sl. No. | Geographical area description of the project | Near by villages of the proposed area & District | Existing capacity in MW | Capacity on enhancement in MW | Total capacity in MW. |
|---|---|---|---|---|---|
| 1. | The proposed area is private land and Binnala Halla and Bavi Halla are crossing in the area. The area is surrounded by the points A, B, C, D and are held in the following Geographical co-ordinates as:<br>**Point A**:Latitude: 15°25'0"N, Longitude:75°50'0"E<br>**Point B**: Latitude: 15°30'0"N, Longitude:75°50'0"E<br>**Point C**: Latitude: 15°30'0"N, Longitude:75°55'0"E<br>**Point D**: Latitude: 15°25'0"N, Longitude:75°55'0"E<br><br>Peaks:624, 616, 619, 621, 598, 604, 599, 585, 618, 602, 607, 600 and 613m Amsl<br><br>Toposheet No:48 M/15 | Sompura, Binnala, Chikkenakoppa, Hanchehal, Shidnekoppa and Timmapura Villages of Yelaburga Taluk, Koppal District. | 3.4 MW | 177MW (180.4-3.4=177) | 180.4MW (82 Nos x 2200 kW) |

**ಷರತ್ತುಗಳು**

1 M/s ReNew Surya Roshni Private Limited ಕಂಪನಿಯು ಸರ್ಕಾರಿ ಆದೇಶ ಸಂಖ್ಯೆ:ಇಎನ್ 435 ಎನ್.ಸಿ.ಇ 2011, ದಿನಾಂಕ:06.01.2012ರನ್ವಯ 45 ದಿನಗಳ ಒಳಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಪೂರಕ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

2 M/s ReNew Surya Roshni Private Limited ಕಂಪನಿಯು ಯೋಜನೆಯ ವರ್ಗಾವಣೆಗೆ ಸಂಬಂಧಿಸಿದಂತೆ ನಿಯಮಾನುಸಾರ ನಿಗದಿಪಡಿಸಿರುವ ವರ್ಗಾವಣೆ ಶುಲ್ಕವನ್ನು ಕೆ.ಆರ್.ಇ.ಡಿ.ಎಲ್.ಗೆ ಪಾವತಿಸತಕ್ಕದ್ದು.

3 M/s ReNew Surya Roshni Private Limited ರವರು ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು ಅಂತರ-ರಾಜ್ಯ ಪ್ರಸರಣಕ್ಕಾಗಿ (ISTS) ಅಗತ್ಯವಿರುವ ಉಪ ಪ್ರಸರಣ ಮತ್ತು ಪ್ರಸರಣ ಜಾಲವನ್ನು ತನ್ನ ಸ್ವಂತ ಸಂಪನ್ಮೂಲಗಳಿಂದ ಭರಿಸುವ ಹಾಗೂ ಪಿಜಿಸಿಐಎಲ್ ಹತ್ತಿರ ಲಭ್ಯವಿರುವ ಎನರ್ಜಿ ಇಂಜೆಕ್ಷನ್ ಪಾಯಿಂಟ್ ಉಪಯೋಗಿಸಿಕೊಳ್ಳುವ ಷರತ್ತಿನೊಂದಿಗೆ ಸಹಮತಿಸಿದೆ.

4 ಈ ಆದೇಶವನ್ನು ರದ್ದುಪಡಿಸುವ/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಉಳಿದಂತೆ, ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 208 ಎನ್‌ಸಿಇ 2020, ದಿನಾಂಕ:13.11.2020ರಲ್ಲಿ ನಮೂದಿಸಿರುವ ಎಲ್ಲಾ ಷರತ್ತು ಮತ್ತು ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

N. Mangalagowri 11/2/21
(ಎನ್.ಮಂಗಳಗೌರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

11/2/21

**ಇವರಿಗೆ:-**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ / ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಕಲಬುರಗಿ.
5. ಜಿಲ್ಲಾಧಿಕಾರಿ, ಕೊಪ್ಪಳ ಜಿಲ್ಲೆ, ಕೊಪ್ಪಳ.

6. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು.
7. ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಕೊಪ್ಪಳ ಜಿಲ್ಲೆ, ಕೊಪ್ಪಳ.
8. M/s ReNew Surya Roshni Private Limited # 138, Ansal Chambers-II, Bhikaji Cama Place, Delhi-110 066.
9. M/s Coastal Consolidated Structures Private Limited, No.60-3-23/A, Coastal Building Near ITI Bus Stop, Ashok Nagar, Vijayawada-520010, Andhra Pradesh.
10. M/s Sitac Management & Development Private Limited, Ashoka Estate, 24, Bharakhamba Road, New Delhi-110001.
11. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
12. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಹಿರಿಯ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ಬೆಂಗಳೂರು.
13. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ, ಬೆಂಗಳೂರು.
14. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು